ದಿನಾಂಕಃ 16.11.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದಃ

ನಿಪಿ 15 ಃ ಹೊರರೋಗಿ ಕಾರ್ಡ್

ನಿಪಿ 16 ಃ 3 ಎಕ್ಸರೆಗಳು

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ

ನಾನು ಅರ್ಜಿದಾರರಿಗೆ ಯಾವುದೇ ಚಿಕಿತ್ಸೆಯನ್ನು ನೀಡಿರುವುದಿಲ್ಲ. ಅರ್ಜಿದಾರರಿಗೆ ಏನು ಚಿಕಿತ್ಸೆಯನ್ನು ನೀಡಿರುತ್ತಾರೆ ಎನ್ನುವ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಎಕ್ಸರೇಯ ಪ್ರಕಾರ ಬಲ ಯುಮರ್ಸ್ ಮೂಳೆಯ ಜೋಡಣೆಯಾಗಿರುತ್ತದೆ. ಅದರೆ ಒಳಜೋಡಣೆಗಳು ಹಾಗೆಯೇ ಇರುತ್ತದೆ. ಬಲ ಅಲನಾ ಮೂಳೆ ಒಂದು ಕಡೆ ಜೋಡಣೆಯಾಗಿದ್ದು ಇನ್ನೊಂದು ಕಡೆ ಕೂಡಿರುವುದಿಲ್ಲ. ಅದರ ಒಳಜೋಡಣೆ ಹಾಗೆಯೇ ಇರುತ್ತದೆ. ಸದರಿ ಅಂಗನ್ಯೂನತೆಯಲ್ಲಿ ಯಾವುದೇ ಪ್ರೊಗ್ರಸ್ ಇರುವುದಿಲ್ಲ. ಅರ್ಜಿದಾರರಿಗೆ ಅದಂತಹ ಎಲ್ಲಾ ಮೂಳೆ ಮುರಿತಗಳು ಸಂಪೂರ್ಣ ಜೋಡಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 4ರಲ್ಲಿ ತಿಳಿಸಿರುವ ಕಷ್ಟಗಳು ಬಲಗೈಗೆ ಸಂಬಂದಪಟ್ಟಿರುತ್ತದೆ ಎಂದರೆ ಸರಿ. ಅ ಕಾರಣದಿಂದ ಅರ್ಜಿದಾರರು ಅವರ ಎಡಗೈಯಿಂದ ಕೆಲಸವನ್ನು ಮಾಡಬಹುದು ಎಂದರೆ ಅಷ್ಟು ಸಂಪರ್ಕವಾಗಿ ಮಾಡಲು ಅಗುವುದಿಲ್ಲ ಹಾಗೂ ಅವರಿಗೆ ಕಷ್ಟವಾಗುತ್ತದೆ. ಶೇ 21.5 ಅಂಗನ್ಯೂನತೆಯನ್ನು ಅರ್ಜಿದಾರರನ್ನು ಯಾವುದೇ ಕ್ಲಿನಿಕಲ್ ಪರೀಕ್ಷೆಗೆ ಒಳಪಡಿಸದೆ ಉಹೆಯ ಮೇರೆಗೆ ತಿಳಿಸಿರುತ್ತೇನೆಂದರೆ ಸರಿಯಲ್ಲ. ಕೀಲುಗಳ ಚಲನವಲನ ಹಾಗೂ ಸ್ನಾಯುಗಳ ಬಲ ಅರ್ಜಿದಾರರಿಗೆ ಅದಂತಹ ಮೂಳೆ ಮುರಿತದ ಅಧಾರದ ಹಾಗೂ ಅದರ ಗಾಯದ ಸ್ವಭಾವದ ಮೇಲೆ ಅವಲಂಬಿತವಾಗಿದೆ. ಅ ರೀತಿ ತೊಂದರೆ ಇದ್ದಾಗ ಪಿಸಿಯೋಥೆರಪಿಗೆ ಸೂಚನೆ ನೀಡಲಾಗುತ್ತದೆ ಎಂದರೆ ಸರಿ. ಅರ್ಜಿದಾರರು ಪಿಸಿಯೋಥೆರಪಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದರು ಎನ್ನುವ ಬಗ್ಗೆ ತಿಳಿಸಿದ್ದರು ಅದರೆ ಅದರ ಬಗ್ಗೆ ದಾಖಲೆಯನ್ನು ನಾನು ನೊಡಲಿಲ್ಲ. ಈಗ ಅರ್ಜಿದಾರರಿಗೆ ಪಿಸಿಯೋಥೆರಪಿ ನೀಡಿದರೆ ಅವರ ಮೂಳೆ ಮುರಿತದ ಜೋಡಣೆಯಲ್ಲಿ ಯಾವುದೇ ಬದಲಾವಣೆ ಕಂಡು ಬರುವುದಿಲ್ಲ. ಅರ್ಜಿದಾರರಿಗೆ

ಅನುಕೂಲವಾಗಲೀ ಎಂದು ಹೆಚ್ಚಿನ ಅಂಗನ್ಯೂನತೆಯನ್ನು ಯಾವುದೇ ಪರೀಕ್ಷೆಗೆ ಒಳಪಡಿಸದೆ ತಿಳಿಸಿರುತ್ತೇನೆಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಚಿಕಿತ್ಸೆಯನ್ನು ನೀಡಿರದ ಕಾರಣ ಅಂಗನ್ಯೂನತೆಯನ್ನು ನಿರ್ಧರಿಸಲು ಸಮರ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

1ನೇ ಎದುರುದಾರರು ಹಾಗೂ ಪರ ವಕೀಲರು ಗೈರು ಹಾಜರು. ಅದುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

17ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ